

# ಕರಣ್ ನಟಿಸಲು ಸಿದ್ಧ

ಕರಣ್ ಜೋಹರ್‌ಗೆ ಯಾರಾದರೂ ನಟಿಸಲು ಅವಕಾಶ ಕೊಡುವುದಾದರೆ ಆತ ರೆಡಿ. ಹಾಗೆಂದು ಸಾಮಾಜಿಕ ಜಾಲತಾಣದಲ್ಲಿ ಒಂದು ಪ್ರಕಟಣೆಯನ್ನೇ ಆತ ಕೊಟ್ಟುಬಿಟ್ಟಿದ್ದಾರೆ. ಬಾಲಿವುಡ್‌ನ ಯಶಸ್ವೀ ನಿರ್ದೇಶಕನೊಬ್ಬ ಹೀಗೆ 'ನನಗೊಂದು ಪಾತ್ರ ಕೊಡಿ' ಎಂದು, ಅದೂ 46ರ ವಯಸ್ಸಿನಲ್ಲಿ ಕೇಳಿಕೊಳ್ಳುವುದು ತಮಾಷೆಯಾಗಿ ಕಾಣಿಸುತ್ತಿದೆ. ಆದರೆ ಕರಣ್ ಜೋಹರ್ ತಮಾಷೆ ಮಾಡುತ್ತಿಲ್ಲವಂತೆ.

'ಹಿಂದೆ ನಾನು ನಟನಾಗಿ ಹಲವು ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದೇನೆ. ಈಗ ಮತ್ತೆ ಬಣ್ಣ ಹಚ್ಚುವ ಮನಸ್ಸಾಗಿದೆ. ಈ ವಯಸ್ಸಲ್ಲಿ ತಂದೆ ಪಾತ್ರ ಬಿಟ್ಟು ಬೇರೆ ಪಾತ್ರಗಳನ್ನು ಕೇಳುವುದು ಸರಿಯಲ್ಲ ಅನ್ನುವುದೂ ನನಗೆ ಗೊತ್ತಿದೆ. ತಂದೆ ಪಾತ್ರಕ್ಕೂ ರೆಡಿ. ನನ್ನ ಆ್ಯಕ್ಟಿಂಗ್ ಸಾಮರ್ಥ್ಯ ಕೊರೊನಾ ವೈರಸ್‌ಗಿಂತ ಭಯಾನಕ ಅನ್ನುವುದು ನನಗೂ ಗೊತ್ತು. ರಿಸ್ಕ್ ತೆಗೆದುಕೊಳ್ಳಲು ತಯಾರಿರುವ ಯಾವುದೇ ನಿರ್ದೇಶಕರಾದರೂ ನನ್ನ ಮನವಿಯನ್ನು ಆಲಿಸಬಹುದು' ಎಂದು ಕರಣ್ ಜೋಹರ್ ಹೇಳಿಕೊಂಡಿದ್ದಾರೆ.

ಈ ಹಿಂದೆ 2015ರಲ್ಲಿ 'ಬಾಂಬೆ ವೆಲ್ವೆಟ್' ಸಿನಿಮಾದಲ್ಲಿ ಕರಣ್ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದುಂಟು. ಆ ಬಳಿಕ 'ಲಕ್ಕಿ ಬೈ ಚಾನ್ಸ್', 'ಫ್ಯಾಷನ್', 'ಓಂ ಶಾಂತಿ ಓಂ' ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಿದ್ದಾರೆ. ಕರಣ್ ಜೋಹರ್ ಕೋರಿಕೆಗೆ ತಕ್ಷಣದ ಪ್ರತಿಕ್ರಿಯೆ ಬಂದಿರುವುದು ನಿರ್ಮಾಪಕಿ ಏಕತಾ ಕಪೂರ್‌ನಿಂದ. ಯಶಸ್ವಿ ಟಿವಿ ಧಾರಾವಾಹಿಗಳ ನಿರ್ಮಾಪಕಿ ಆಗಿರುವ ಏಕತಾ, 'ಕರಣ್, ನೀವು ಟಿವಿಗೆ ಬನ್ನಿ. ಇಲ್ಲಿ ಹೆಚ್ಚು ಜನರನ್ನು ಬೇಗ ಮೆಚ್ಚಿಸುವುದು ಸುಲಭ. ಏಕೆಂದರೆ ಟಿವಿಯಲ್ಲಿ ಪ್ರತಿದಿನ ನಿಮ್ಮ ಮುಖ ಕಾಣಿಸುತ್ತದೆ' ಎನ್ನುವುದು ಏಕತಾ ಆಹ್ವಾನ.

# ಚಿತ್ರಾಂಗದಾ ಸಲಹೆ



ಕೊರೊನಾ ವೈರಸ್ ದಾಳಿಯಿಂದ ಬಾಲಿವುಡ್ ಕೂಡಾ ಕಂಗಾಲಾಗಿದೆ. ಭಾರೀ ಬಜೆಟ್‌ನ ಸಿನಿಮಾಗಳು ತೆರೆ ಕಾಣದೆ ಉಳಿದಿದ್ದರೆ, ನೂರಾರು ಸಿನಿಮಾಗಳ ಶೂಟಿಂಗ್ ಅರ್ಧಕ್ಕೆ ನಿಂತಿದೆ. ಈ ಮಧ್ಯೆ ಹಿಂದೊಮ್ಮೆ ಬಾಲಿವುಡ್‌ನಲ್ಲಿ ನಡೆದ 'ಮಿ ಟೂ' ಚಳವಳಿ ಎಲ್ಲರಿಗೂ ಮರೆತೇ ಹೋಗಿದೆ. ಈಗ ಈ 'ಮಿ ಟೂ' ಹಾವಳಿಯನ್ನು ನೆನಪಿಸಿದ್ದಾರೆ ನಟಿ ಚಿತ್ರಾಂಗದಾ ಸಿಂಗ್.

'ಕಾಸ್ಟಿಂಗ್ ಕೌಚ್ ಸಮಸ್ಯೆ ಬಾಲಿವುಡ್‌ನಲ್ಲಿ ಇರುವುದು ನಿಜ. ಹೊಸತರಲ್ಲಿ ಬಂದಾಗ ನಿಮಗೆ ಅವಕಾಶ ಸಿಗಬೇಕೆಂದಿದ್ದರೆ ಕೆಲವು ನಿರ್ಮಾಪಕ, ನಿರ್ದೇಶಕರು ಹೇಳಿದಂತೆ ಕೇಳಿ ಎಂದು ಕಾಟ ಕೊಡುವುದುಂಟು. ನಾನೂ ಆರಂಭದಲ್ಲಿ ಅಂಥದ್ದನ್ನು ಎದುರಿಸಿದ್ದೇನೆ. ಆದರೆ ಯಾರೇ ಆದರೂ ಇಲ್ಲಿ ನಿಮ್ಮನ್ನು ಬಲವಂತ ಮಾಡಲಾಗದು. ಧೈರ್ಯವಿದ್ದರೆ ಎದುರಿಸಿ ಗೆಲ್ಲಬೇಕು' ಎಂದು ಸಂದರ್ಶನವೊಂದರಲ್ಲಿ ಈಗ ನಿರ್ಮಾಪಕಿಯೂ ಆಗಿರುವ ಚಿತ್ರಾಂಗದಾ ಸಲಹೆ ನೀಡಿದ್ದಾರೆ.

'ಈ ತರಹದ ಜನ ಎಲ್ಲ ರಂಗಗಳಲ್ಲೂ ಇದ್ದಾರೆ. ನಾನು ಮಾಡೆಲ್ ಆಗಿದ್ದಾಗಿನಿಂದಲೂ ಇಂತಹ ವಿಷಯಗಳನ್ನು ಕೇಳಿದ್ದೇನೆ. ಕಾರ್ಪೊರೇಟ್ ಕ್ಷೇತ್ರದಲ್ಲಿ ಈ ಸಮಸ್ಯೆ ಇದೆ. ಆದರೆ ಬಾಲಿವುಡ್‌ನಲ್ಲಿ ನಿಮ್ಮನ್ನು ಯಾರೂ ಹಾಗೆ ಬಲವಂತ ಮಾಡಲಾಗದು. ಅವಕಾಶ ಕೈತಪ್ಪಿದರೆ ನಿಮಗೆ ಕೆಟ್ಟದ್ದೆನ್ನಿಸಬಹುದು. ಆದರೆ ನೀವು ನಿಮ್ಮ ಆಯ್ಕೆಯನ್ನು ಮಾಡಿಕೊಳ್ಳಲೇಬೇಕು. ಇಲ್ಲಿ ನಾನು ಯಾವುದೇ ತೀರ್ಪು ನೀಡಲು ಬಯಸುವುದಿಲ್ಲ' ಎಂದಿದ್ದಾರೆ ಚಿತ್ರಾಂಗದಾ.

ಇತ್ತೀಚೆಗೆ ನಟ ಆಯುಷ್ಮಾನ್ ಖುರಾನಾ ಕಾಸ್ಟಿಂಗ್ ಕೌಚ್ ಹಾವಳಿಯ ಬಗ್ಗೆ ಗಮನ ಸೆಳೆದಿದ್ದರು. 'ನನಗೂ ಒಬ್ಬ ಕಾಸ್ಟಿಂಗ್ ನಿರ್ದೇಶಕ ಪಾತ್ರ ಕೇಳಿದಾಗ ಅಶ್ಲೀಲ ಮಾತನ್ನಾಡಿದ್ದುಂಟು. ನಾನು ಅಲ್ಲಿಂದ ಎದ್ದು ಬಂದೆ' ಎಂದಿದ್ದರು.

■ ಬಿಂದು